## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

ಎಸ್‌ಸಿ. 258/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ರವೀಂದ್ರ ಕುಮಾರ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ರಾಜೇಗೌಡ | | **16.06.2025** |
| ವಯಸ್ಸು | ಃ 43 ವರ್ಷ | | |
| ವೃತ್ತಿ | ಃ ಪ್ರಥಮ ದರ್ಜೆ ಸಹಾಯಕರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕುಶಾಲನಗರ | ಪ್ರಾ.ಸಾ. | ಃ 23 |
| ವಾಸಸ್ಥಳ | ಃ ಮೈಸೂರು | ಚಾ.ಸಾ. | ಃ 05 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಸ್ಥಳ ಪಂಚನಾಮೆ ತೋರಿಸಿದ್ದು ಸಾಕ್ಷಿದಾರರು ತಮ್ಮ ಸಹಿ ನೋಡಿ ಗುರುತಿಸಿದ್ದು. ಸ್ಥಳ ಪಂಚನಾಮೆಯನ್ನು ಈಗಾಗಲೇ ನಿ.ಪಿ-9 ಎಂದು ಗುರುತಿಸಿಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿ.ಪಿ-9(ಡಿ) ಎಂದು ಗುರುತಿಸಲಾಯಿತು. ಸಿದ್ದಲಿಂಗಪುರದಲ್ಲಿ ಒಂದು ಕೊಲೆಯಾಗಿರುತ್ತದೆ ಆ ಸ್ಥಳಕ್ಕೆ ಹೋಗಬೇಕಾಗುತ್ತದೆ ಎಂದು ಹೇಳಿ ಪೋಲೀಸ್ ಠಾಣೆಗೆ ಕರೆಸಿಕೊಂಡು ನನಗೆ ನೋಟಿಸ್ ಅನ್ನು ಕೊಟ್ಟಿದ್ದರು. ಬಿಲ್ಡಿಂಗ್ ನ ಬೇಕರಿ ಮಾಲೀಕರು ಪೋಲೀಸ್ ಠಾಣೆಯಲ್ಲಿ ಇದ್ದರು. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿ ಸಹ ಇದ್ದ. ನನ್ನನ್ನು ಮತ್ತು ವಿಶ್ವರೂಪರವರನ್ನು ಪೊಲೀಸ್ ಜೀಪ್ ನಲ್ಲಿ ನ್ಯಾಯಾಲಯದ ಮುಂದೆ ಹಾಜರು ಇರುವ

ಆರೋಪಿಯನ್ನು ಎರಡು ಜೀಪ್ ನಲ್ಲಿ ಕರೆದುಕೊಂಡು ಗುರು ರಾಘವೇಂದ್ರ ಬೇಕರಿಯ ಹತ್ತಿರ ಹೋಗಿದ್ದೆವು. ಬಿಲ್ಡಿಂಗ್ ಮಾಲೀಕರು ಬೇಕರಿಯನ್ನು ತೋರಿಸಿದ್ದರು ಮತ್ತು ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತನು ಸಹ ಕೊಲೆಯಾದಂತ ಜಾಗ ಇದೇ ಎಂದು ಹೇಳಿದ್ದ. ಬೇಕರಿ ಅಂಗಡಿ ಕ್ಲೋಸ್ ಆಗಿತ್ತು. ಬಿಲ್ಡಿಂಗ್ ಮಾಲೀಕರಾದ ಕುಮಾರ್ ಎನ್ನುವವರು ಬೀಗ ತಂದು ಕೊಟ್ಟಿದ್ದರು ಆ ರೀತಿ ಬೀಗ ತಂದು ಕೊಟ್ಟ ಮೇಲೆ ಬೇಕರಿ ಅಂಗಡಿಯನ್ನು ಒಪನ್ ಮಾಡಿದ್ದರು. ಪೊಲೀಸರು ಮತ್ತು ಆರೋಪಿ ಒಳಗಡೆ ಹೋದರು ಅವರ ಜೊತೆಯಲ್ಲಿ ನಾವು ಸಹ ಒಳಗಡೆ ಹೋಗಿದ್ದೆವು. ಆರೋಪಿತನಿಗೂ ಮತ್ತು ಮಮತಾ ಎನ್ನುವವರಿಗೆ ಹಣಕಾಸಿನ ವ್ಯವಹಾರ ಇತ್ತು ಎಂದು ಆರೋಪಿ ಒಪ್ಪಿಕೊಂಡಿದ್ದ. ಒಂದು ಕಬ್ಬಿಣದ ರಾಡನ್ನು ಆರೋಪಿ ತೋರಿಸಿದ್ದ ಆರೋಪಿ ಆ ಕಬ್ಬಿಣದ ರಾಡಿನಲ್ಲಿ ಮಮತಾಗೆ ಹೊಡೆದಿದ್ದೆ ಎಂದು ಹೇಳಿ ತೋರಿಸಿದ್ದ. ಕಬ್ಬಿಣದ ರಾಡನ್ನು ಬಿಳಿ ಬಟ್ಟೆಗೆ ಹಾಕಿ ಸುತ್ತಿಕೊಂಡು ಸೀಲ್ ಮಾಡಿದ್ದರು. ಆ ಕಬ್ಬಿಣದ ರಾಡು ಬೇಕರಿಯ ಒಳಗಡೆ ಬೇಕರಿಯ ವಸ್ತುಗಳನ್ನು ತಯಾರು ಮಾಡುವ ವಸ್ತುಗಳ ಹತ್ತಿರ ನೀರಿನ ಬಾಟಲ್ ಹತ್ತಿರ ಇತ್ತು. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತನೇ ಆ ಕಬ್ಬಿಣದ ರಾಡನ್ನು ತೆಗೆದುಕೊಟ್ಟಿದ್ದ. ಆ ಕಬ್ಬಿಣದ ರಾಡಿಗೆ ರಕ್ತದ ಕಲೆಯಾಗಿತ್ತು. ನಾನು ಆ ಕಬ್ಬಿಣದ ರಾಡನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ರಾಡೇ ನಾನು ಹೇಳಿದಂತ ಕಬ್ಬಿಣದ ರಾಡು (ಸ್ಟೀಲ್ ರಾಡು) ಇರುತ್ತದೆ. ಅದನ್ನು ಈಗಾಗಲೇ ಮು.ಮಾ-5 ಎಂದು ಗುರುತಿಸಿಲ್ಪಟ್ಟಿರುತ್ತದೆ. ಪೊಲೀಸರು ಪಂಚನಾಮೆ ಮಾಡಿದ್ದರು. ಸ್ಥಳದಲ್ಲಿ ರಕ್ತದ ಕಲೆಯಾಗಿತ್ತು ಆ ರಕ್ತ ಕೆಳಗಡೆ ಬಿದ್ದಿತ್ತು. ಸ್ಥಳದಲ್ಲಿ ಪೊಟೋಗಳನ್ನು ತೆಗೆದಿದ್ದರು. ಪೊಲೀಸರು ಕೆಲವೊಂದು ವಸ್ತುಗಳನ್ನು ಆ ಸ್ಥಳದಿಂದ ತೆಗೆದುಕೊಂಡಿದ್ದರು ನಾನು ಅಷ್ಟಾಗಿ

ಗಮನಿಸಿರಲಿಲ್ಲ. ನಾನು ಪೊಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಪೊಟೋಗಳನ್ನೇ ಆ ದಿನ ತೆಗೆದ ಪೊಟೋಗಳು ಇರುತ್ತವೆ. ಸಾಕ್ಷಿದಾರರು ನೋಡಿ ಗುರುತಿಸಿದಂತ ಪೊಟೋಗಳನ್ನು ಈಗಾಗಲೇ ನಿ.ಪಿ-*12* ರಿಂದ *15* ಎಂದು ಗುರುತಿಸಿಲ್ಪಟ್ಟಿರುತ್ತದೆ. ಪೊಲೀಸರು ಈ ಬಗ್ಗೆ ನನ್ನ ಹೇಳಿಕೆ ತೆಗೆದುಕೊಂಡಿದ್ದರು. ದಿಃ*25.05.2023* ರಂದು ಪೊಲೀಸರು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು. ಸಾಕ್ಷಿದಾರರು ಪೊಲೀಸ್ ನೋಟಿಸ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-*31* ಎಂದು ಸಾಕ್ಷಿದಾರರ ಸಹಿಯನ್ನು ನಿ.ಪಿ-*31*(ಎ) ಎಂದು ಗುರುತಿಸಲಾಯಿತು.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ದಿಃ*25.05.2023* ರಂದು ತನಿಖಾಧಿಕಾರಿಗಳು ಹಿಂದಿನ ದಿನ ಸಾಕ್ಷಿ ಎಂ.ಕುಮಾರ್ ಬೇಕರಿ ಶಟರ್ ನ ಬೀಗದ ಕೀ ಅನ್ನು ತನ್ನ ಬಳಿ ಕೊಟ್ಟಿದ್ದು ಸಾಕ್ಷಿ ಸಂರಕ್ಷಣೆಗಾಗಿ ಬೇಕರಿಯನ್ನು ಬೀಗ ಹಾಕಿ ಮುಚ್ಚಿದ್ದು ಮತ್ತು ಸಾಕ್ಷಿ ಸಂರಕ್ಷಣೆಗಾಗಿ ಒಬ್ಬ ಗಾರ್ಡ್ ಅನ್ನು ನೇಮಕ ಮಾಡಿದ್ದರು ಎಂದರೆ ಸರಿ. ಸಾಕ್ಷಿ ಎಂ.ಕುಮಾರ್ ಎನ್ನುವವರನ್ನು ಪೊಲೀಸರು ಕರೆಸಿದ್ದರು ರಾತ್ರಿ ಸ್ಥಳಕ್ಕೆ ಬಂದಿದ್ದ ಪೊಲೀಸ್ ಇನ್ಸ್ ಪೆಕ್ಟರ್ ಗೆ ಬೀಗದ ಕೀ ಅನ್ನು ಕೊಟ್ಟಿದ್ದೆ ರಾತ್ರಿಯಿಂದ ಇಲ್ಲಿಯವರೆಗೆ ಪೊಲೀಸ್ ಸಿಬ್ಬಂದಿಗಳು ಮುಕ್ಕಾಂ ಇದ್ದಾರೆ ಎಂದು ತಿಳಿಸಿದ್ದರು ಎಂದರೆ ಸರಿ. ಪೊಲೀಸರು ಸ್ಥಳದಿಂದ ರಕ್ತ ಹೆಪ್ಪು ಗಟ್ಟಿದ ರಕ್ತವನ್ನು ಕೆರೆದು ಬಾಟಲ್ ಗೆ

ತೆಗೆದುಕೊಂಡಿದ್ದರು ಎಂದರೆ ಸರಿ. ಸ್ಥಳದಲ್ಲಿ ರಕ್ತಮಯವಾದಂತಹ ಫುಟ್ ಮ್ಯಾಟ್ ಅನ್ನು ಸಹ ಪೊಲೀಸರು ತೆಗೆದುಕೊಂಡಿದ್ದರು ಎಂದರೆ ಸರಿ. ಪೊಲೀಸರು ಅವುಗಳನ್ನು ಅಮಾನತ್ತು ಪಡಿಸಿಕೊಂಡು ಪಂಚನಾಮೆ ಮಾಡಿದ್ದರು ಎಂದರೆ ಸರಿ. ಇದೇ ರೀತಿ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ. ನಾನು ಆರೋಪಿತನನ್ನು ಪೊಲೀಸರು ಹೇಳಿದ್ದು ಸರಿಯಿದೆಯೋ ಇಲ್ಲವೊ ಎಂಬ ಬಗ್ಗೆ ವಿಚಾರಣೆ ಮಾಡಿದ್ದೆ ಅದಕ್ಕೆ ಆರೋಪಿ ಒಪ್ಪಿಕೊಂಡಿದ್ದ ಎಂದರೆ ಸರಿ. ಈಗ ನಾನು ನೋಡುತ್ತಿರುವ ರಕ್ತಮಯವಾದ ಫುಟ್ ಮ್ಯಾಟ್, ರಕ್ತ ಹೆಪ್ಪು ಗಟ್ಟಿದ ಸ್ಥಳದಿಂದ ತೆಗೆದ ರಕ್ತ ಎಂದರೆ ಸರಿ. ಸಾಕ್ಷಿದಾರರು ನೋಡಿ ಗುರುತಿಸಿದಂತ ವಸ್ತುಗಳು ಈಗಾಗಲೇ ಮು.ಮಾ-*6* ಮತ್ತು *7* ಎಂದು ಗುರುತಿಸಲ್ಪಟ್ಟಿದೆ. ಮು.ಮಾ-*5* ಸ್ಟೀಲ್ ರಾಡು ಇರುತ್ತದೆ ಎಂದರೆ ಸರಿ. ನಾನು ಅದನ್ನೇ ನೋಡಿದ್ದೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ- ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು